Regd No B G 155

# ಸತ್ಯವಾದಿ

23—9—1965

49th Year
Satyavadi
DAILY
MYSORE 4

ಸಂಸ್ಥಾಪಕರು — ಅರವಿನೆ ಸಿಂಸ್ಕೇದಾರ್ ಎಂ ಏ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಪಾರ್ಲಮೆಂಟ್

ಮೈಸೂರು — ಈ ಮಾಹೆಯ ಪ್ರಾರಂಭದಲ್ಲಿ ಪುಸ್ತಕ ಪ್ರಾಧಿಕೇತನವು ತಾ|| 30 ಗುರುವಾರ ನಡೆಯುವುದು

❁

ಶ್ರೀ ಗಣೇಶ ವಿಹಾರಮಂಗಳಾರತಿ

ಮೈಸೂರು — ಚಾಮುಂಡಿಪುರಂನಲ್ಲಿರುವ ಶ್ರೀ ಶಂಕರನಾರಾಯಣಸ್ವಾಮಿ ಇಂಡಸ್ಟ್ರಿಯಲ್ ಎಸ್ಟೇಟ್ ಆಫ್ ಕಾರ್ಮಿಕರಲ್ಲಿ ಶ್ರೀ ಗಣಪತಿ ವಿಹಾರ ಮಂಗಳಾರತಿಯು ನಿನ್ನೆ ದಿವಸ ವೈಭವವಾಗಿ ನೆರವೇರಿತು.

❁

ಶ್ರೀಚಕ್ರ ಲಕ್ಷಾರ್ಚನೆ

ಮೈಸೂರು — ಹಳ್ಳಿದಕೇರಿ (ಅಶೋಕ ರೋಡ್ ಕ್ರಾಸ್) ಯಲ್ಲಿರುವ ಜ್ಯೋತಿರ್ಮಂದಿರದಲ್ಲಿ ಶ್ರೀಚಕ್ರ ಲಕ್ಷಾರ್ಚನೆಯು ತಾ|| 26-9-65 ರಿಂದ ಪ್ರಾರಂಭವಾಗಿ ತಾ || 5-10-65 ಮಂಗಳವಾರ ವಿಜಯದಶಮಿಯಂದು ವಿಹಾರೋತ್ಸವದೊಂದಿಗೆ ನೆರವೇರುವುದೆಂದು ಶ್ರೀ ಸಿದ್ಧಾಂತಿ ಎಂ.ಎಸ್.ಚಂದ್ರಶೇಖರಜೋಯಿಸರವರು ತಿಳಿಸಿದ್ದಾರೆ

❁

ಗಾಂಧೀಜಿಯವರ ಅಮೃತವಾಣಿ

ವಿಶ್ವದ ಯಾವುದೇ ಶಕ್ತಿಗೂ ತಲೆಬಾಗಿಸೆಂಬ ದೃಢನಿರ್ಧಾರಕ್ಕಿಂತಲೂ ಹೆಚ್ಚಿನ ಶೌರ್ಯ ಬೇರೊಂದಿಲ್ಲ ; ಈ ಶಕ್ತಿ ಎಷ್ಟೇ ಪ್ರಬಲವಾಗಿರಲಿ, ಕಹಿ ಮನಸ್ಸಿಲ್ಲದೆ, ಧರ್ಮದಲ್ಲಿ ನಂಬಿಕೆಯಿಟ್ಟಿರುವ ಆ ಚೈತನ್ಯವೊಂದೇ ಶಾಶ್ವತವಾಗಿ ಉಳಿಯಬಲ್ಲದು; ಇನ್ನೆಲ್ಲವೂ ನಶ್ವರ.

---

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಅಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂದಕ್ಕ ಕೃಷ್ಣಜೋಯಿಸರವರಿಂದ

24 ಶುಕ್ರ ಚತುರ್ದಶಿ (ಬಿ 10-58) ಪುಬ್ಬ

ಕಾವೇರಿ ನೀರಿನ ಬಿಡಲು

ನವದೆಹಲಿ — ಭಾರತವು ಕಾವೇರಿ ನೀರನ್ನು ಬಿಡಬೇಕೆಂದು ಪಾರ್ಲಿಮೆಂಟು ಕಾಂಗ್ರೆಸು ಪಾರ್ಟಿ ಮೀಟಿಂಗಿನಲ್ಲಿ ತೀರ್ಮಾನ ಅಭಿಪ್ರಾಯಪಟ್ಟರು

★

ಫಕ್ರೂನಿಸ್ತಾನ್

ನವದೆಹಲಿ — ಫಕ್ರೂನರ ಕೇಳಿಕೆ ವಿಚಾರದಲ್ಲಿ ಭಾರತದ ಸಹಾನುಭೂತಿ ಮತ್ತು ಬೆಂಬಲವಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

★

ವಾಮಪಕ್ಷದ ಹೇಳಿಕೆ

ಕಲ್ಕತ್ತಾ — ಚೀನವು ಭಾರತದೊಡನೆ ವ್ಯಾಜ್ಯವನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳದೆ ಮಿಲಿಟರಿ ಕಾರ್ಯಕ್ಕೆ ತೊಡಗಿದ ಅದು ಹೊಸ ಆಕ್ರಮಣ ಕಾರಿಯೆಂದು ವಾಮ ಐಕ್ಯರಂಗವು ನಿರ್ಧರಿಸಿದೆ

❁

ಶೃಂಗೇರಿ ಜಗದ್ಗುರುಗಳವರು

ಮಾಲೂರು — ಕೋಲಾರಕ್ಕೆ ಹೋಗುವ ಮಾರ್ಗದಲ್ಲಿ ಶುಕ್ರವಾರ ಶೃಂಗೇರಿ ಜಗದ್ಗುರುಗಳು ಇಲ್ಲಿಗೆ ಭೇಟಿ ಕೊಟ್ಟು ಅನೇಕರಿಗೆ ದರ್ಶನ ದಯಪಾಲಿಸಿದರು

★

ಅಜದ ಕಾಶ್ಮೀರ

ಬೆಂಗಳೂರು — 500 ಮಂದಿ ಮುಸ್ಲಿಂರು ಮೌನವಹಿಸಿ ನಂತರ ಸಭೆ ಸೇರಿ ಅಜಾದು ಕಾಶ್ಮೀರದ ಬಂಧ ವಿಮೋಚನೆ ಮಾಡಲೂ ಸರಕಾರಕ್ಕೆ ಹೆಂಬಲ ನೀಡಲೂ ಪ್ರತಿಜ್ಞೆ ಮಾಡಿದರು.

❁

ರಷ್ಯಾ ವಿಜಯದಲ್ಲಿ

ಬೊಂಬಾಯಿ — ರಷ್ಯವು ಭಾರತದ ನಂಬಿಕಸ್ತ ಮಿತ್ರನೆಂದು ಪ್ರಧಾನಿ ಶಾಸ್ತ್ರಿಗಳು ಹೇಳಿದರು

## ಎಚ್ಚರದಿಂದಿರಬೇಕೆಂದು ಕರೆ

★

ನೂರು ಪಾಕಿಸ್ತಾನಿಗಳು

ಮೈಸೂರು ರಾಜ್ಯದಲ್ಲಿ ನೂರು ಮಂದಿ ಪಾಕಿಸ್ತಾನಿಗಳಿರುವರೆಂದು ನಿಖರವಾಗಿದೆ

★

ಸಬ್‌ಮೆರೀನುಗಳು

ನವದೆಹಲಿ — ಭಾರತಕ್ಕೆ ಅವಶ್ಯವಾದ ಸಬ್‌ಮೆರೀನುಗಳು ಸಿದ್ಧವಾಗಿದೆಯೆಂಬ ಯಾವಾಗ ಕೊಡಲಾಗುವುದೆಂದು ಹೇಳುವುದಿಲ್ಲವೆಂದೂ ರಾಜ್ಯಸಭೆಯಲ್ಲಿ ತಿಳಿಸಲಾಯಿತು

★

ಬೆಲೆ ಇಳಿದಿದೆ

ನವದೆಹಲಿ — ಕರ್ಕ ಪರಿಸ್ಥಿತಿಯು ಹಲವಾರು ದೇಶಭಕ್ತ ವರ್ತಕರು ತಮ್ಮ ದಾಸ್ತಾನುಗಳನ್ನು ಬಿಡ ಗಡೆ ಮಾಡಿರುವುದರಿಂದ ಬೆಲೆ ತಗ್ಗಿರುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು

★

ಸ್ವೇಚ್ಛ ನಿರ್ಬಂ

ನವದೆಹಲಿ — ಸರಕಾರಿಯವಲ್ಲದ ವಿಮಾನಗಳಲ್ಲಿ ಪ್ರಧಾನಿಗಳು ತಮಗೂ ತಮ್ಮ ಜೊತೆಯವರಿಗೂ ವಿಮಾನ ಛಾರ್ಜನ್ನು ತಮ್ಮ ಕೈಯಿಂದ ಕೊಡುತ್ತಾರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಕಾಫಿಬೆಳೆ

ಬೆಂಗಳೂರು — ದೇಶದಲ್ಲಿ ಹೆಚ್ಚಿನ ಕಾಫೀ ಬೆಳೆಯಬೇಕೆಂದು ಕಾಫೀ ಬೋರ್ಡ್ ಅಧ್ಯಕ್ಷ ಶ್ರೀ ಎ ಎಸ್ ಅಯ್ಯರ್‌ರವರು ಹೇಳಿದರು.

ಪ್ರಮುಖ ವಾರ್ತೆಗಳು

ಇಂದು ಬೆಳಗಿನ ಜಾವ 3ವರೆ ಗಂಟೆಯಿಂದ ಕದನ ವಿರಾಮ ಪೂರ್ಣವಾಗಿ ಜಾರಿಗೆ ಬಂತು — ಈ ಆದೇಶವನ್ನು ಪ್ರಧಾನಿ ಶಾಸ್ತ್ರಿಗಳು — ಲೋಕಸಭೆಯಲ್ಲಿ ತಿಳಿಸಿದರು ಭದ್ರತಾ ಮಂಡಲಿಯಲ್ಲಿ ಪಾಕೀಸ್ತಾನದ ಮಂತ್ರಿ ಭುಟ್ಟೋರವರು ಮಾಡಿರುವ ದೃಷ್ಟಿಯಿಂದ ನಾವು ಎಚ್ಚರದಿಂದ ಇರಬೇಕು ಎಂದರು.

ಕದನವಿರಾಮವಾದರೂ ಹೋರಾಟ ನಿಂತಿಲ್ಲವೆಂದು ಪಾಕೀಸ್ತಾನೂ ಅಧ್ಯಕ್ಷ ಅಯೂಬ ಖಾನರು ತಿಳಿಸಿದರು

ಉತ್ತರ ಪ್ರದೇಶದ ಭೂಮಿಯೊಳಗೆ ನಿನ್ನೆ ಚೀನೆ ಅತಿಕ್ರಮಣಗಾರರು ಪ್ರವೇಶಿಸಿದ್ದರು

ಈ ರಾತ್ರಿ 8 ವರೆ ಗಂಟೆಗೆ ಪ್ರಧಾನಿ ಶಾಸ್ತ್ರಿಯವರು ಪ್ರಸಾರ ಭಾಷಣ ಮಾಡುವರು

ಇಂದಿನಿಂದ ದೆಹಲಿಯಲ್ಲಿ ಬ್ಲಾಕ್ ಔಟ್ ರದ್ದಾಗಿದೆ

ಪಾಕೀಸ್ತಾನದ ವಿಮಾನ ದಾಳಿಯಿಂದ ನಿನ್ನೆ ನೂರು ಮಂದಿ ಮರಣ ಹೊಂದಿದರು

ಅತಿಕ್ರಮಣ ಪ್ರದೇಶ ವಿರುದ್ಧ ಭಾರತ ಚೀನಾಕ್ಕೆ ಪ್ರತಿಭಟನೆ ಮಾಡಿದೆ ಎಂದು ನವ ದೆಹಲಿ ವಾರ್ತೆ

---

ಉಡುಪು ತಯಾರಿಸುವ ಯಿಷ್ಣ

ನ್ಯೂಯಾರ್ಕ್ — ಮಾನವನ ನೆರವಿಲ್ಲದೆ ಸ್ವಾನದ ಉಡುಪನ್ನು ತಯಾರಿಸುವ ಎಲೆಕ್ಟ್ರಾನಿಕ್ ಯಿಷ್ಣನ್ನು ಸೋವಿಯಟ್ ರಷ್ಯಾರ ಪ್ರದರ್ಶಿಸಲಾಯಿತು — ತಾಯ್ಲೆಂಡಿನ ಅಸ್ಥಾನ ಹಾಂಗಕಾಕುಲ ವಿಶ್ವ ಸುಂದರಿ ಗೆ ಅಳತೆಗೆ ತಕ್ಕಂತೆ ಉಡುಪು ತಯಾರಿಸಿಕೊಟ್ಟಿತು.

# ಪೂರ್ವ ಕರ್ಮ ವಿಪಾಕವು

ಲೇಖಕಂ.- ಎ ನ ಅಯ್ಯಂಗಾರ್, ಹೊಂಗನೂರು

*

[ ಮುಂದುವರಿದುದು ]

ಗರುಭಾರ್ಯಾ ಸಮಾಗಮ ಮಾಡಿದವನಿಗೆ ಮೂತ್ರಕೃಚ್ಛ್ರರೋಗ ಪ್ರಾಯಶ್ಚಿತ್ತವಾಗಿದೆ; ಈ ಪಾಪಪರಿಹಾರಕ್ಕೆ ಶಾಸ್ತ್ರೋಕ್ತವಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು : ಪಶುಸಮಾಗಮ ಮಾಡಿದವನಿಗೂ ವೃತ್ತಕೃಚ್ಛ್ರ ರೋಗ ಪ್ರಾಪ್ತವಾಗುತ್ತದೆ ; ಈ ಪಾಪ ಪರಿಹಾರಕ್ಕೆ 3 ತಿಲಪಾತ್ರ ದಾನಮಾಡಬೇಕು

ಪುಂಸ್ತ್ವೋಪಘಾತ ಮಾಡಿದವನಿಗೆ ಅಪಸ್ಮಾರ ರೋಗವಾದರೂ ಅಶ್ಮರಿ ರೋಗವಾದರೂ ಪ್ರಾಪ್ತಿಯಾಗುತ್ತದೆ, ಈ ಪಾಪನಿವಾರಣೆಗೆ ಸ್ವರ್ಣ ದಾನಾದಿ ಮಾಡಬೇಕು.

ಶೂದ್ರನ ಅನ್ನವನ್ನಾದರೂ ಕರ್ಮಠಹಿತನ ಅನ್ನವನ್ನಾದರೂ ಭೋಜನ ಮಾಡಿದರೆ ಶೂಲರೋಗ ವೃತ್ತ ಅಜೀರ್ಣ ಉಂಟಾಗುತ್ತದೆ.

ವೇದಶಾಸ್ತ್ರಸಂಪನ್ನನಾದ, ಇಂದ್ರಿಯನಿಗ್ರಹಿಯಾದ, ದರಿದ್ರನಾದ ಬ್ರಾಹ್ಮಣನನ್ನು ನಾನಾರ್ಥವಾಗಿ ಕರೆದು, ಅಂಥವನಿಗೆ ದಾನ ಕೊಡದೇ ಹೋಗುತ್ತಾನೋ ಆ ಮನುಷ್ಯನು ಬೇರೆ ಜನ್ಮದಲ್ಲಿ ಒಕ್ಕುಶೂಲೆ ಅಧ್ಮಾನ ರೋಗಗಳನ್ನು ಹೊಂದುತ್ತಾನೆ ; ಈ ಪಾಪ ನಿವಾರಣೆಗಾಗಿ ಕೃಚ್ಛ್ರ ಅತಿಕೃಚ್ಛ್ರ ಚಾಂದ್ರಾಯಣ ಪ್ರಾಯಶ್ಚಿತ್ತಗಳನ್ನು ಮಾಡಬೇಕು.

ದ್ರವ್ಯಸಂಕನಾದವನು ಶ್ರದ್ಧಾಹೀನನಾಗಿ, ದಾನಮಾಡುವುದರಲ್ಲಿ ಇಷ್ಟವಿಲ್ಲದೇ ತಾತ್ಸಾರವಾಗಿ ದಾನವನ್ನು ಮಾಡಿದರೆ ಅರುಚಿ ವೃತ್ತ ಶೂಲೆರೋಗಗಳು ಪ್ರಾಪ್ತವಾಗುತ್ತವೆ ; ಈ ಪಾಪ ಪರಿಹಾರಕ್ಕೆ ಚಾಂದ್ರಾಯಣವನ್ನೂ ಅತಿಕೃಚ್ಛ್ರವನ್ನೂ ಹೋಮವನ್ನೂ ಮಾಡಬೇಕು.

ಪೂರ್ವಜನ್ಮದಲ್ಲಿ ಗೋವು ಬ್ರಾಹ್ಮಣ ಮುಂತಾದವರನ್ನು ತಾನಾಗಿ ಸಂಹಾರ ಮಾಡಿದಂಥಾ ಪಾಪಿಗೆ, ಕಲೆಕೂಲೆ ಕರ್ಣಶೂಲೆ ಶೂಲೆ ಅರುಚಿ ರೋಗಗಳು ಪ್ರಾಪ್ತವಾಗುತ್ತವೆ : ಈ ಪಾಪಪರಿಹಾರಕ್ಕೆ ಒಂದು ವರ್ಷ, ಎಂಟು ವರ್ಷ ಅಥವಾ ಮೂರು ವರ್ಷ ಪೈತಪ್ರತ ಮಾಡಿ ನಂತರ ಗೋದಾನ ಹಿರಣ್ಯ ದಾನಗಳನ್ನು ಮಾಡಿದರೆ ಈ ಪಾಪ ಪರಿಹಾರವಾಗುತ್ತದೆ [ ಮುಂದುವರಿಯುವುದು

---

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ

## Help The Gorakshana

ಸಹಾಯಕರು ರೂ 10, ಪ್ರೋತ್ಸಾಹಕರು ರೂ 25 ; ( ಒಂಟಿ ಸಾಲಿನಶ್ರ )

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕ ವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4


ವುಡಲ್ಯಾಂಡ್ಸ್ 24-9-65 ರಿಂದ
ಶಿ ಸ ಅಮೋಘ ಆರಂಭ

ಆಯೊ ಪ್ಯಾರ್ ಕರೆ (ಹಿಂದಿ)
ಶೀ
Aao Pyar Karen

ಜಾಯ್ ಮುಖರ್ಜಿ — ಸೈರಾ ಬಾನು ರವರ ಕಲಾತ್ಮಕ ನಟನೆ
ಆಕರ್ಷಣೀಯ ಅಭಿನಯದಿಂದ ಕೂಡಿದ ಸುಂದರ ಹಿಂದಿ ಚಿತ್ರ
ಪ್ರತಿ ದಿನ 3 ಪ್ರದರ್ಶನಗಳು

ಅಪೆರ— ಅಮೋಘ 4 ನೇ ವಾ
ವೀರ ಅಭಿಮನ್ಯು (ತೆಲುಗು)
ಶಿ
ಸೌತ್ — ಎನ್ ಟಿ ರಾಮರಾವ್, ಕಾಂಚನ, ಕಾಂತಾರಾವ್, ರಾಜನಾಲ
ಪದ್ಮನಾಭಂ, ಸೋಬರ್‌ಬಾಬು, ಜಿ ವಂಲಕ್ಷ್ಮಿ [ ದಿನ 3 ಆಟಗಳು

SHAKTI
SUDHA

A Superb Tonic

ಆಶೋಕ ಏಜೆನ್ಸೀಸ್
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Quality Printing — Neat Binding
Lakshminarasimha Press
Sivarampet, Mysore

Protect the Cow
ಗೋರಕ್ಷೆಗಾಗಿ ಬೆಂಬಲ ನೀಡಿ
ಶ್ರೀ ದ್ವಾರಕಾ ಜಗದ್ಗುರು ಮಹಾಸನ್ನಿಧಿಗಳವರು, ಶ್ರೀ ಶೃಂಗೇರಿ ಜಗದ್ಗುರು
ಮಹಾಸನ್ನಿಧಿಗಳವರು ಉದಾರ ಅನುಗ್ರಹ ಕೃಪೆಯಾಗಿಬ್ಬಿ
ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ತಾಪಶಾಪಹಾರ, ಪಶುವೈದ್ಯ ಎಚ್ಚರ
ಗೆಂದ ಕೂಡಿದ ಏಕೈಕ ಧರ್ಮಾಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ಪೈ



Edited, Printed & Published by Dharma prachara nirata
M S Krishna Rao ( Proprietor ) at the Satyavadi Press
Chamarajapuram, Mysore 4